**FDP 01/2012**

**FDP 01/2012**

## ಪ್ರಾಥಮಿಕ ಡಿಕ್ರಿಯ ಮೇಲಿನ ಆದೇಶ

ಈ ಪ್ರಕರಣದ ಅರ್ಜಿದಾರರು ಈ ಪ್ರಕರಣದ ಎದುರುದಾರ 1 ರಿಂದ 4 ರವರ ವಿರುದ್ದ ಪಾಲು ವಿಭಾಗ ಕೋರಿ ಅಸಲು ದಾವಾ ನಂ. 31/2007 ರ ದಾವೆ ದಾಖಲು ಮಾಡಿದ್ದು, ಆ ದಾವೆಯಲ್ಲಿ ಈ ನ್ಯಾಯಾಲಯವು ದಿಃ 05.12.2011 ರಂದು ಪ್ರಾಥಮಿಕ ಡಿಕ್ರಿಯನ್ನು ಮಾಡಿದ್ದು, ಆ ಡಿಕ್ರಿಯ ಪ್ರಕಾರ ಅರ್ಜಿದಾರ 1 ಮತ್ತು 2 ರವರು ಜಂಟಿಯಾಗಿ 1/2 ಹಿಸ್ಸೆ ಹಾಗೂ ಪ್ರತಿವಾದಿ 1 ಮತ್ತು 2 ರವರು ಜಂಟಿಯಾಗಿ 1/2 ಹಿಸ್ಸೆ ಪಾಲನ್ನು ಹೊಂದಿರುವುದಾಗಿ ಎಂದು ಆದೇಶ ಮಾಡಿರುವರು.

**2**. ಪ್ರಾಥಮಿಕ ಡಿಕ್ರಿಯ ಮೇರೆಗೆ ಅರ್ಜಿದಾರರು ಈ ಎಫ್.ಡಿ.ಪಿ ಪ್ರಕರಣವನ್ನು ದಾಖಲು ಮಾಡಿದ್ದು, ಈ ಪ್ರಕರಣದ ವಿಚಾರಣೆಯ ಹಂತದಲ್ಲಿ ಎದುರುದಾರ 5 ರವರು ಮಧ್ಯಂತರ ಅರ್ಜಿ ಸಂಖ್ಯೆ 11 ನ್ನು ತಾನು ಅವಶ್ಯಕ ಪಕ್ಷಗಾರಳಾಗಿರುವಳು ಎಂದು ಅರ್ಜಿ ಸಲ್ಲಿಸಿದ್ದು, ಆ ಅರ್ಜಿಯ ಆದೇಶದ ಮೇರೆಗೆ ಎದುರುದಾರ 1 ವಿನ ಸಹೋದರಿಯಾದ ಎದುರುದಾರ 5 ರವರನ್ನು ಈ ಪ್ರಕರಣದಲ್ಲಿ ಪಕ್ಷಗಾರಳನ್ನಾಗಿ ಸೇರ್ಪಡೆ ಮಾಡಲು ಈ ನ್ಯಾಯಾಲಯ ಆದೇಶದ ಮಾಡಿರುವುದು. ಅದೇ ರೀತಿ 1 ನೇ ಎದುರುದಾರನ 2 ನೇ ಹೆಂಡತಿಯ ಮಕ್ಕಳನ್ನು ಸಹ ಎದುರುದಾರ 6 ರಿಂದ 9 ಎಂದು ಈ ಪ್ರಕರಣಕ್ಕೆ ಪಕ್ಷಗಾರಾಗಿ ಸೇರ್ಪಡೆಗೊಂಡಿರುವರು.

**3**. ಎದುರುದಾರ 5 ರವರು ಈ ಎಫ್.ಡಿ. ಪಿ ಪ್ರಕರಣದಲ್ಲಿ ತಮ್ಮ ತಕರಾರನ್ನು ಸಲ್ಲಿಸಿ ಆ ತಕರಾರಿನಲ್ಲಿ ಹೇಳಿರುವಂತೆ ದಾವಾ ಆಸ್ತಿಗಳು ತನ್ನ ತಂದೆಯಾದ ಮೃತ ಬಸಪ್ಪ ಮಲ್ಲಪ್ಪ ಸಿದ್ದಗೊಂಡ ಇತನ ಆಸ್ತಿಗಳಾಗಿದ್ದು, ಇತನಿಗೆ ತಾನು, ಪ್ರತಿವಾದಿ 1 ಹಾಗೂ ಕಸ್ತೂರಿ ಎಂಬ ಹೆಣ್ಣು ಮಗಳು ಇದ್ದು, ದಾವಾ ಆಸ್ತಿಗಳಲ್ಲಿ ತನ್ನ ಮತ್ತು ಪ್ರತಿವಾದಿ 1 ಮತ್ತು ಕಸ್ತೂರಿಯ ಮಧ್ಯೆ

ಪಾಲು ವಿಭಾಗವಾಗಿರುವುದಿಲ್ಲ. ಆದ್ದರಿಂದ ದಾವಾ ಆಸ್ತಿಗಳಲ್ಲಿ ಎದುರುದಾರ 5 ರವರಿಗೆ ಸಹ 1/3 ಹಿಸ್ಸೆ ಇರುವುದಾಗಿ ಎಂದು ತಕರಾರು ಸಲ್ಲಿಸಿದ್ದು ನಂತರ ಎದುರುದಾರ 5 ರವರು ತಮ್ಮನ್ನು ಆರ್ ಡಬ್ಲ್ಯೂ 1 ಎಂದು ವಿಚಾರಣೆಗೊಳಪಡಿಸಿಕೊಂಡಿರುವರು.

**4.** ಆರ್ ಡಬ್ಲ್ಯೂ 1 ರವರು ತಮ್ಮ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಮ್ಮ ತಕರಾರಿನಲ್ಲಿ ಹೇಳಿರುವ ಸಂಗತಿಗಳನ್ನು ಯಥವತ್ತಾಗಿ ಪುನರುಚ್ಚುರಿಸುತ್ತಾ ತನ್ನ ತಂದೆ ಬಸಪ್ಪ ಹಾಗೂ ತಾಯಿ ಶಿವಕ್ಕ ಇವರು ಮೃತ ಪಟ್ಟಿದ್ದು, ತನ್ನ ತಂದೆ ಮೃತ ಪಟ್ಟ ನಂತರ ದಾವಾ ಆಸ್ತಿಗಳಲ್ಲಿ ತನ್ನ, ಪ್ರತಿವಾದಿ 1, ತನ್ನ ಸಹೋದರಿ ಕಸ್ತೂರಿಯ ಹೆಸರಿನಲ್ಲಿ ವಾರಸಾನಾತೆಯಿಂದ ದಾವಾ ಆಸ್ತಿಗಳಿಗೆ ಹಕ್ಕು ಬದಲಾವಣೆಯಾಗಿದ್ದು ನಂತರ ಪ್ರತಿವಾದಿ ತನ್ನ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿಕೊಂಡಿರುವರು. ಪ್ರತಿವಾದಿ 1 ರವರಿಗೆ ವಾದಿ 2 – ಮಹಾದೇವಿ ಎಂಬ ಹೆಸರಿನ ಮೊದಲನೇಯ ಹೆಂಡತಿ ಮತ್ತು ಶಾರಧಾ ಎಂಬ ಹೆಸರಿನ 2 ನೇ ಹೆಂಡತಿ ಇರುವರು. ವಾದಿ 1 ರವರು ಮತ್ತು ಪ್ರತಿವಾದಿ 2 ರವರು ಮೊದಲನೇಯ ಹೆಂಡತಿ ವಾದಿ 1 ರವರ ಮಕ್ಕಳಾಗಿರುವರು. ಎದುರುದಾರ 6 ರಿಂದ 9 ರವರು ಪ್ರತಿವಾದಿ 1 ರವರ 2 ನೇ ಹೆಂಡತಿಯ ಮಕ್ಕಳಾಗಿರುವರು. ಈ ದಾವೆಯ ವಾದಿಯರು ಎದುರುದಾರ 5 ರವರಿಗೆ ಮಾಹಿತಿಯನ್ನು ನೀಡಿದೇ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಅಸಲು ದಾವಾ ನಂ. 31/2007 ರ ದಾವೆ ದಾಖಲು ಮಾಡಿದ್ದು, ಈ ದಾವಾ ಆಸ್ತಿಗಳಲ್ಲಿ ಎದುರುದಾರ 5 ರವರಿಗೆ, ಪ್ರತಿವಾದಿ 1 ರವರಿಗೆ ಮತ್ತು ತನ್ನ ಸಹೋದರಿಯಾದ ಕಸ್ತೂರಿಗೆ ತಲಾ 1/3 ಹಿಸ್ಸೆ ಇರುವುದಾಗಿ ಎಂದು ಸಾಕ್ಷಿ ನುಡಿದಿರುವರು.

**5.** ಅರ್ಜಿದಾರ ಪರ ವಕೀಲರು ಆರ್ ಡಬ್ಲ್ಯೂ 1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಆ ಪಾಟೀ ಸವಾಲಿನಲ್ಲಿ ಆರ್

ಡಬ್ಲ್ಯೂ 1 ರವರ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಬಂಧಗಳನ್ನು ನಿರಾಕರಿಸಿರುವುದಿಲ್ಲ. ದಾವಾ ಆಸ್ತಿಗಳು ಆರ್ ಡಬ್ಲ್ಯೂ 1 ರವರ ತಂದೆಯ ಆಸ್ತಿಗಳು ಎಂಬ ಸಂಗತಿಯನ್ನು ಸಹ ನಿರಾಕರಿಸಿರುವುದಿಲ್ಲ. ಆದರೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿ 1 ರವರ ಹೆಸರಿನಲ್ಲಿ 'ಡ' ನಂಬರ 4352 ರ 1989 ರ ಪ್ರಕಾರ ಹಕ್ಕು ಮಂಜೂರಾಗಿರುವುದನು ಆರ್ ಡಬ್ಲ್ಯೂ 1 ರವರು ಒಪ್ಪಿಕೊಂಡಿರುವರು. ಆದರೆ ತಾನು, ತನ್ನ ತಾಯಿ ಮತ್ತು ಸಹೋದರಿ ಕೂಡಿಕೊಂಡು ದಾವಾ ಆಸ್ತಿಗಳಲ್ಲಿನ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿರುವರು ಎಂಬ ಸಂಗತಿಯನ್ನು ಆರ್ ಡಬ್ಲ್ಯೂ 1 ರವರು ಸಂಪೂರ್ಣವಾಗಿ ನಿರಾಕರಿಸಿರುವರು. ದಾವಾ ಆಸ್ತಿಗಳಿಗೆ ಪ್ರತಿವಾದಿ 1 ರವರು ಹೆಸರು ವಾರಸಾನಾತೆಯಿಂದ ಮಂಜೂರಾಗಿದ್ದರು ಸಹಿತ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಕುಟುಂಬದ ಮೂಲ ಪುರುಷ ಬಸಪ್ಪ ಮಲ್ಲಪ್ಪ ಸಿದ್ದಗೊಂಡ ಇತ ಮೃತ ಪಟ್ಟ ನಂತರ ಆತನ ಕಾನೂನು ಬದ್ದವಾದ ಮೊದಲನೇಯ ವರ್ಗದ ವಾರಸುದಾರರ ಮಧ್ಯೆ ಯಾವುದೇ ಪಾಲು ವಿಭಾಗವಾಗಿರುವುದಿಲ್ಲ. ಹಿಂದೂ ಉತ್ತಾರಾಧಿಕಾರ ತಿದ್ದುಪಡಿ ಅಧಿನಿಯಮ 2005 ರ ಪ್ರಕಾರ ಮೃತ ಬಸಪ್ಪನ ಕಾನೂನು ಬದ್ದವಾದ ವಾರಸುದಾರರಾದ ಎದುರುದಾರ 5, ಪ್ರತಿವಾದಿ 1 ಮತ್ತು ಕಸ್ತೂರಿ ಇವರು ತಲಾ 1/3 ಹಿಸ್ಸೆಯನ್ನು ದಾವಾ ಆಸ್ತಿಗಳಲ್ಲಿ ಹೊಂದಿರುವರು. ಆದ್ದರಿಂದ ದಾವಾ ಆಸ್ತಿಗಳಲ್ಲಿ ಪ್ರತಿವಾದಿ 1 ರವರಿಗೆ 1/3 ಹಿಸ್ಸೆ ಹೊಂದಿದ್ದು, ಈ ಹಿಸ್ಸೆಯಲ್ಲಿ ವಾದಿ 1, 2 ಮತ್ತು ಪ್ರತಿವಾದಿ 2 ರವರು ಪಾಲು ಪಡೆದುಕೊಳ್ಳುವ ಹಕ್ಕನ್ನು ಹೊಂದಿರುವರು. ಆದ್ದರಿಂದ ವಾದಿ 1 ಮತ್ತು 2 ರವರು ತಲಾ 1/12 ಮತ್ತು ಪ್ರತಿವಾದಿ 1 ಮತ್ತು 2 ರವರು ತಲಾ 1/12 ಹಿಸ್ಸೆಯನ್ನು ದಾವಾ ಆಸ್ತಿಗಳಲ್ಲಿ ಪಾಲನ್ನು ಪಡೆಯುವ ಹಕ್ಕನ್ನು ಹೊಂದಿರುವರು. ಆದ್ದರಿಂದ ಈ ಪ್ರಾಥಮಿಕ ಡಿಕ್ರಿಯನ್ನು ಕಳೆಕಂಡಂತೆ ತಿದ್ದುಪಡಿ ಮಾಡಲು ಆದೇಶಿಸಿದೆ. ಆದ್ದರಿಂದ ಈ ಕಳೆಕಂಡಂತೆ

## <u>ಆದೇಶ</u>

ದಾವಾ ಆಸ್ತಿಗಳಲ್ಲಿ ಕುಟುಂಬದ ಮೂಲ ಪುರುಷನಾದ ಬಸಪ್ಪನ ಮಕ್ಕಳಾದ ಎದುರುದಾರ 1, ಎದುರುದಾರ 5 ಮತ್ತು ಕಸ್ತೂರಿ ತಲಾ 1/3 ಹಿಸ್ಸೆಯನ್ನು ಪಡೆದುಕೊಳ್ಳುವ ಹಕ್ಕನ್ನು ಹೊಂದಿರುವರು.

ಎದುರುದಾರ 1 ರವರಿಗೆ ಪಾಲಿಗೆ ಬರುವಂತಹ 1/3 ಹಿಸ್ಸೆಯಲ್ಲಿ ವಾದಿ 1 ಮತ್ತು 2 ರವರು ತಲಾ 1/12 ಹಾಗೂ ಪ್ರತಿವಾದಿ 1 ಮತ್ತು 2 ರವರು ತಲಾ 1/12 ಪಾಲನ್ನು ಹೊಂದಿರುವರು.

ಈ ಮೇಲ್ಕಂಡಂತೆ ಪ್ರಾಥಮಿಕ ಡಿಕ್ರಿಯನ್ನು ತಿದ್ದುಪಡಿ ಮಾಡಲು ಕಚೇರಿಗೆ ಆದೇಶಿಸಿದೆ.

ಈ ತಿದ್ದುಪಡಿಯಾದ ಪ್ರಾಥಮಿಕ ಡಿಕ್ರಿಯ ಪ್ರಕಾರ ಹಿಸ್ಸೆ ಪಡೆಯುವ ಸಲುವಾಗಿ ನ್ಯಾಯಾಲಯದ ನಿಯೋಗಿ ನೇಮಕ ಮಾಡಿಕೊಳ್ಳಲು ಮುಂದೆ ಕರೆಯುವ ತಾರೀಖು 06.06.2026.

VIJAYAKUMAR KANNUR

Digitally signed by VIJAYAKUMAR KANNUR
Date: 2026.06.01 17:07:59 +0530

**Prl. Sr. CJ and JMFC, Mudhol**